Regd No*B ೮ 155 6-1-1970

SATYAVADI Daily, MYSORE 4 ☆☆ 53 rd Year of Publication

ಸುವರ್ಣ ಮಹೋತ್ಸವ ನಡೆವೇರಿಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಮನೆ ಏರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈ,ಸೆ

ಪೂರ್ವ ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ಕೇಳಿಕೆ

ವಿಗ್ರಹ ಕಳ್ಳರು

ನವದೆಹಲಿ– ಉತ್ತರ ಪ್ರದೇಶದಿಂದ ಮೂರು ಮಂದಿ ಮಾರಲು ತಂದಿದ್ದ 15 ವಿಗ್ರಹಗಳನ್ನು ಪೋಲೀಸರು ವಶಪಡಿಸಿಕೊಂಡು ಅವರನ್ನು ಬಂಧಿಸಿದರು – ಇವು ಕ್ರಿ ಶ 2 ಮತ್ತು 12 ನೇ ಶತಮಾನಗಳವಾಗಿವೆ – ಇವರ ಕಾರ್‌ನಲ್ಲಿ ಸಿಕ್ಕಿದ ಕಾಗದಪತ್ರಗಳಿಂದ ವಿಗ್ರಹ ಕಳ್ಳರ ತಂಡಕ್ಕೂ ಪ್ರವಾಸಿ ಗೈಡುಗಳಿಗೂ ಸಂಬಂಧವಿರುವದು ಕಂಡುಬಂದಿದೆ – ಅಮೂಲ್ಯವಾದ ಈ ವಿಗ್ರಹಗಳು ರೂ 50 ಲಕ್ಷಕ್ಕೆ ಮಾರಲಾಗುತ್ತಿತ್ತೆಂದು ಹೇಳಲಾಗಿದೆ.

●

ಬಂಗ್ಲಾದೇಶ

ಕೃಷ್ಣಗರ— ಪೂರ್ವ ಪಾಕಿಸ್ತಾನದ ಅಲ್ಪಸಂಖ್ಯಾಕರು, ಡಿಕ್ಕಾದಲ್ಲಿ ನಡೆಸಿದ ಸಮ್ಮೇಳನದಲ್ಲಿ, ಪಾಕಿಸ್ತಾನವನ್ನು ಜಾತ್ಯಾತೀತ ದೇಶವಾಗಿ ಘೋಷಿಸಬೇಕೆಂದು ಕೇಳಿಕೆ ಹಾಕಿದರು – ಪೂರ್ವ ಪಾಕಿಸ್ತಾನಕ್ಕೆ 'ಬಂಗ್ಲಾದೇಶ' ಎಂದು ಹೆಸರಿಡಬೇಕೆಂದೂ ಕೇಳಿಕೆ ಹಾಕಿದರು.

★

ನರಬಲಿ

ಕುರಾರಸ್ (ಆಗ್ರಾ)— ನಾಗತಿದೇವಿ ದೇವಾಲಯದಲ್ಲಿ ಹಣದಾಶೆಗಾಗಿ 14 ವರ್ಷದ ಸುರಾಜಭಾನ್ ಎಂಬ ಹುಡುಗನನ್ನು ಬಲಿಕೆಟ್ಟ ಆಪಾದನೆಗೆ ಪೂಜಾರಿ ಬಾಬಾ ಸುಂದರದಾಸ್ ಮತ್ತು ಭರತಸಿಂಗ್ ದಸ್ತಗಿರಿ ಮಾಡಲ್ಪಟ್ಟಿದ್ದಾರೆ – ಜನರು ತಮ್ಮ ಮಕ್ಕಳನ್ನು ಹೊರಗೆ ಬಿಡಲು ಹೆದರುತ್ತಿದ್ದಾರೆ.

★

ಪರೀಕ್ಷಾ ಫಲಿತಾಂಶ

ಮೈಸೂರು— ಕಳೆದ ಆಕ್ಟೋಬರ್‌ನಲ್ಲಿ ನಡೆದ ವಿಶ್ವವಿದ್ಯಾನಿಲಯದ ಎಲ್ಲಾ ಇಂಜಿನೀರಿಂಗ್ ಪರೀಕ್ಷೆಗಳ ಫಲಿತಾಂಶವು ತಾ॥ 9 ರಂದು ಬೆಳಿಗ್ಗೆ 6 ಗಂಟೆಗೆ ಪ್ರಕಟಿಸಲಾಗುವುದು.

○

ತಿರಸ್ಕಾರ

ಅಮೃತಸರ— ಚಂಡೀಘರ್ ಸಮಸ್ಯೆ ಬಗ್ಗೆ ಉಪವಾಸ ಮತ್ತು ಪ್ರಾಣಾರ್ಪಣೆ ಮಾಡಬಾರದೆಂದು ಸಂತ ಫತೇಸಿಂಗರಿಗೆ ಹಳೇ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಮಾಡಿದ ಮನವಿಯನ್ನು ಅವರು ತಿರಸ್ಕರಿಸಿರುವರು.

○

ಕಪಿ ಮನುಷ್ಯ

ಡಾರ್ ಎ ಸಲಾ— ಇಲ್ಲಿಗೆ 150 ಮೈಲಿ ದೂರದ ತಾನ್ಸಾನಿಯಾ ಮಿಕಮಿ ರಾಷ್ಟ್ರೀಯ ಪಾರ್ಕಿನಲ್ಲಿ ಒಬ್ಬ ಕಪಿ ಮನುಷ್ಯ ನೆಲೆಸಿರುವುದು ಕಂಡುಬಂದಿದೆ – ಈತನು ಮಾನವರ ಜೊತೆಗಿಂತ ವನ್ಯಜೀವಿಗಳ ಸಹವಾಸ ಬಯಸುತ್ತಾ, ಮ್ಯಾಡಾ ಕಣಿವೆಯ ಒಂದು ಬಹಳ ದೊಡ್ಡ ಮರದ ಕೆಳಗೆ ಒಂದು ಪೊಟ್ರೆಯಲ್ಲಿ ವಾಸಿಸುತ್ತಾನೆ.

★

ಮೊಸಳೆ ಜೊತೆ ನಾಟ

ಬ್ರಿಟ್ಸ್ (ದಕ್ಷಿಣ ಆಫ್ರಿಕ)— 16 ದಿನಗಳು ರಾತ್ರಿ ಹಗಲು ಗಂ ಮೊಸಳೆಗಳೊಡನೆ 30 x 20 ಅಡಿ ಪಂಜರದಲ್ಲಿ ವಾಸಿಸಿ ಹಾವ್ ಮತ್ತು ಸ್ಯಾಣಿ ಪಾರ್ಕಿನ ಕಾರ್ಯಭಾರಿ ಜಾಕ್ ಸೀಲ್ ಹೊರಗೆ ಬಂದರು – ಹೇಗಾದರೂ ಪ್ರಖ್ಯಾತಿಗೆ ಬರಬೇಕೆಂದು ಹೀಗೆ ಮಾಡಿದುದಾಗಿ ಅತನು ಹೇಳಿಕೊಂಡನು.

ಪಾಕಿಸ್ತಾನಿಯೋ ಭಾರತೀಯನೋ !

ಕೃಷ್ಣಗರ— ಅಬ್ದುಲ್ ಮಂಡಲ್ ಭಾರತದಲ್ಲಿ ಕೆಲಸ ಮಾಡುತ್ತಾನೆ, ಪಾಕಿಸ್ತಾನದಲ್ಲಿ ಮಲಗುತ್ತಾನೆ – ನದಿಯಾ ಜಿಲ್ಲೆಯ ಮಾಟಿಯಾರಿ ಗ್ರಾಮದಲ್ಲಿ ವಿವಿಧ ವ್ಯಾಪಾರ ನಡೆಸುತ್ತಾನೆ – ಗಡಿಯ ಹತ್ತಿರದಲ್ಲಿನ ಗ್ರಾಮದಲ್ಲಿ ಅವನಿಗೆ ಒಂದು ಮನೆ ಇದೆ : ಕೆಲವು ಗಜಗಳ ದೂರದಲ್ಲಿ ಪಾಕಿಸ್ತಾನದಲ್ಲಿ ಮತ್ತೊಂದು ಮನೆ ಇದೆ; ಪಾಪಸ್ತಾನದಲ್ಲಿನ ಮನೆಯಲ್ಲಿ ಅವನ ಹೆಂಡತಿ ವಾಸಿಸುತ್ತಾಳೆ – ಅವನು ಪಾಕಿಸ್ತಾನಿ ಎಂದು ಸ್ಥಳೀಯ ಅಧಿಕಾರಿಗಳು ತೆರಿಗೆ ಹಾಕಿಲ್ಲ ; ಪಾಕಿಸ್ತಾನದಲ್ಲಿ ಅವನು ಭಾರತೀಯನೆಂದು ಎಣಿಸಲಾಗುತ್ತಿದೆ.

●

ನರಮಾಂಸ ತಿನ್ನಿಸಿದರೆ ?

ತ್ರಿವೇಂದ್ರಂ— ಡಿಸೆಂಬರು 19 ರಂದು ಕುಟ್ಟಿಯಾಡಿ ಪೋಲೀಸು ಸ್ಟೇಷನ್ ಮೇಲೆ ಧಾಳಿ ನಡೆಸಿದವರನ್ನು ಆ ಸ್ಟೇಷನ್ನಿನಲ್ಲಿ ಬಂಧಿಸಿ ಇಟ್ಟಿದ್ದಾಗ ಅವರ ಆಹಾರದ ಜೊತೆ ನರಮಾಂಸವನ್ನು ತಿನ್ನಲು ಬಲಾತ್ಕಾರ ಮಾಡಲಾಯಿತೆಂಬ ಘಟನೆಬಗ್ಗೆ ಬಹಿರಂಗ ವಿಚಾರಣೆ ನಡೆಸಲೆಂದು ಮಾರ್ಕ್ಸಿಸ್ಟ್ ಕಮ್ಯೂನಿಸ್ಟ್ ಕೇರಳ ಸರ್ಕಾರಕ್ಕೆ ಸವಾಲು ಹಾಕಿದೆ.

★

ಸ್ಥಾವಿಗಳವರಿಗೆ ಕಾಣಿಕೆ

ಮೈಸೂರು— ಉಡುಪಿಯ ಪಲಿಮಾರು ಮತ್ತು ಬಂಡಾರಕೇರಿ ಮಠದ ಸ್ವಾಮಿಗಳಿಗೆ ಬರುವ "ಪರ್ಯಾಯ" ಕ್ಕಾಗಿ ರೂ. 15000 ನಿಧಿ ಅರ್ಪಿಸಲಾಯಿತು.

○

ಹೆಚ್ಚಿಗೆ ಸಕ್ಕರೆ

ಮೈಸೂರು— ಪೊಂಗಲ್ ಹಬ್ಬಕ್ಕಾಗಿ ಕಾರ್ಡುದಾರರಿಗೆ ಯೂನಿಟ್ಟಿಗೆ 1 ಕೆಜಿ ಹೆಚ್ಚಿಗೆ ಸಕ್ಕರೆ ಕೊಡಲಾಗುವುದು.

ಗೌರ್ನರ್‌ರವರ ಸುಗ್ರೀವಾಜ್ಞೆ

ಬೆಂಗಳೂರು— ಭೂ ಸುಧಾರಣಾ ಕಾರ್ಯಗಳನ್ನು ಲ್ಯಾಂಡ್ ಟ್ರಿಬ್ಯೂನಲ್‌ನಿಂ ಮುನ್ಸೀಫ್ ಕೋರ್ಟುಗಳಿಗೆ ವರ್ಗಾಯಿಸುವಂತೆ ಗೌರ್ನರ್‌ರವರು ಸುಗ್ರೀವಾಜ್ಞೆ ಹೊರಡಿಸಿದ್ದಾರೆ : ಇದು ತು ॥ 15 ರಿಂದ ಜಾರಿಗೆ ಬರುವುದು.

★

ಉಪ್ಪು ಸರಬರಾಜು

ಖಟ್ಮಂಡು— 3 ವರ್ಷ ಕಾಲ ನೇಪಾಳಕ್ಕೆ 55000 ಟ್ ಉಪ್ಪನ್ನು ಭಾರತ ಸರ್ಕಾರ ಸರಬರಾಜು ಮಾಡುವ ಒಪ್ಪಂದವಾಗಿದೆ.

○

ರಾಜಧನ ರದ್ದು ಪಡಿಸಿದರೆ

ಅಹಮದಾಬಾದು— ಭಾರತ ಸರಕಾರವು ರಾಜಧನವನ್ನು ರದ್ದುಪಡಿಸಿದರೆ, ಈ ಬಗ್ಗೆ ಕೋರ್ಟ್‌ನಲ್ಲಿ ಹೋರಾಡಬೇಕೆಂದು ಗುಜರಾತಿನ ಮಾಜಿ ರಾಜರಲ್ಲಿ ಹೆಚ್ಚಿನ ಮಂದಿಯ ಅಭಿಪ್ರಾಯವಾಗಿದೆ.

★

ಚಂದ್ರನಲ್ಲಿಗೆ 7 ಪ್ರವಾಸ

ಹೌಸ್ಟ್— 1974 ರೊಳಗೆ ಅಮೇರಿಕಾ ಚಂದ್ರನಲ್ಲಿಗೆ ಏಳು ಪ್ರವಾಸಗಳನ್ನು ಏರ್ಪಡಿಸಲು ಯೋಜಿಸಿದೆ.

★

ಪರಿಸ್ಥಿತಿ ಉತ್ತಮಗೊಂಡಿಲ್ಲ

ನವದೆಹಲಿ— ಚಂಡೀಘರ ಸಮಸ್ಯೆ ವಿಷಯದಲ್ಲಿ ಪ್ರಧಾನಿಯವರಿಗೂ ಪಂಜಾಬು ಮತ್ತು ಹರಿಯಾಣಾ ಮುಖ್ಯ ಮಂತ್ರಿಗಳಿಗೂ ನಿನ್ನೆ ನಡೆದ ಮಾತುಕತೆಗಳಲ್ಲಿ ಪರಿಸ್ಥಿತಿ ಏನೂ ಉತ್ತಮಗೊಂಡಿಲ್ಲ.

"Bank Road Bahusar – A Fair Price Shop in Actual Practice"

ಹಿಂದಿ ಹೇರುವ ಬಗ್ಗೆ ಎಚ್ಚರಿಕೆ

ತಿರುಚರಪಳ್ಳಿ— ತಮಿಳುನಾಡುವಿನ ಹಿಂದಿ ಇಚ್ಛೆಯಿಲ್ಲದಜನರ ಮೇಲೆ ಹಿಂದಿ ೇರುವ ಬಗ್ಗೆ ಕೈಗಾರಿಕಾ ಮಂತ್ರಿ ಶ್ರೀ ಮಾಧವನ್ ಎಚ್ಚರಿಕೆ ಸೂಚಿಸಿರುವರು.

ಕೇಂದ್ರ ಮಂತ್ರಿಮಂಡಲ

ಬೆಂಗಳೂರು— ಪ್ರಧಾನಿಯವರು ತಮ್ಮ ಮಂತ್ರಿಮಂಡಲಕ್ಕೆ ಬೊಂಬಾಯಿ ಕಾಂಗ್ರೆಸ್ಸಿನಲ್ಲಿ ಆದ ಠರಾವುಗಳನ್ನು ನೆರವೇರಿಸಲು ಅನುಕೂಲವಾದವರನ್ನು ತೆಗೆದು ಕೊಳ್ಳಬೇಕಾಗಿದೆ ಎಂದು ಮೈಸೂರು ಮಾಜಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯ ರು ಹೇಳಿರುವರು.

ದೇವರ ವಿಷಯ

ವಿಜಯವಾಡ— ದೇವರು ಸತ್ತಿರುವನು ? ಎಂಬ ವಿಷಯದಲ್ಲಿ ಇಲ್ಲಿ ನಡೆಸ ಲಾದ ವಾಗ್ವಾದ ಸಭೆಯಲ್ಲಿ, ದೇವನಿರುವನೆಂಬ ಹಿಂದು ಧರ್ಮದ ಪ್ರಖ್ಯಾತ ವ್ಯಾ ಖ್ಯಾನಕಾರರಾದ ಸ್ವಾಮಿ ಚಿನ್ಮಯಾನಂದರೂ, ಪ್ರಖ್ಯಾತ ನಾಸ್ತಿಕವಾದಿ ಗೋಪ ರಾಜು ರಾಮಚಂದ್ರರಾವ್‌ರವರೂ, ಮತಧರ್ಮವು ಜನರ ಅಫೀಹೆನ್ನುವ ಕಮ್ಯೂ ನಿಸ್ಟ್ ಪಾರ್ಟಿಯ ನಾಯಕರಾಗಿದ್ದ ಕಟ್ರಗಡ್ಡ ರಾಮಚಂದ್ರರಾಯರೂ ತಮ್ಮತಮ್ಮ ವಾದದ ಭಾಷಣ ಮಾಡಿದರು — ಹಾಕಲ್ಪಟ್ಟ ಪ್ರಶ್ನೆಗಳಿಗೆಲ್ಲಾ ಕೊಟ್ಟ ಉತ್ತ ರ ಗಳಿಂದ ಸರಿಸಮವಾಯಿತು.

ಸುಗ್ಲೀ ಕೊಲೆ

ಕಲ್ಕತ್ತಾ— ಕಳೆದ ಎರಡು ತಿಂಗಳಲ್ಲಿ ಸುಗ್ಲೀ ಸಂಬಂಧದಲ್ಲಿ ಆದ ಘರ್ಷಣೆ ಗಳಲ್ಲಿ 22 ಮಂದಿಯ ಕೊಲೆಯಾಗಿದೆ.

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಶ್ರೀ ಅನಂತನರಸಿಂಹಯ್ಯಂಗಾರ್, ಶಾಶ್ವತಧರ್ಮಪ್ರಚಾರ ಸಭಾ
ಹೊಂಗನೂರು, ಚಾಮರಾಜನಗರ ತಾಲ್ಲೂಕ

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಟ್ರಾಲಜರ್, 180 ನ್ಯೂ ಬ್ಲಾಕ್,
ವಿದ್ಯಾರಣ್ಯಪುರಂ, ಮೈಸೂರು.

3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್,
ಪ್ರಾಣಿಡಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು

1 ಗೋರಕ್ಷಣ ಆಫೀಸ್, ಸತ್ಯವಾದಿಪ್ರೆಸ್ ಚಾಮರಾಜಪುರಂ, ಮೈಸೂರು

SHAKTI
SUDHA
A Superb Tonic

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-0)
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ದೇಶದ ಹಿತಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

ವುಡ್‌ಲ್ಯಾಂಡ್ ಶಾ. 2–1–70 ರಿಂದ
ಶಿ ನ ಅಮೋಘ ಪ್ರಾರಂಭ

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ

ನಟವರ್ಗ– ಕಲ್ಪನ, ಅಶ್ವತ್, ಬಾಲಕೃಷ್ಣ, ಪಂಡರಿಬಾಯಿ
ನಿರ್ದೇಶನ : ಪುಟ್ಟಣ್ಣ ಕಣಗಾಲ್ ಸಂಗೀತ : ವಿಜಯ ಭಾಸ್ಕರ್
[ದಿನ 3 ಪ್ರದರ್ಶನಗಳು]

ಆಪೆರಾ– ಅಮೋಘ 2ನೇ ವಾರ

.... ಅತ್ಯಮೋಘ ಹಿಂದಿ ಚಿತ್ರ ....

ನನ್ನ ಘರಿಷ್ಟ

ನಿರ್ದೇಶನ ಟಿ. ಪ್ರಕಾಶರಾವ್ ಸಂಗೀತ ಕಲ್ಯಾಣಜಿ ಆನಂದಜಿ (ಕಲರ್)
ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ
ಗೋರಕ್ಷಣಕ್ಕೆ ಬೆಂಬಲ ನೀಡಿ

Protect the Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata
M S Krishna Rao (Proprietor) at the Satyavadi Press
Chamarajapuram, Mysore